ಶಿವಮೊಗ್ಗ ನಗರ ಸಭೆಯ ವ್ಯಾಪ್ತಿಯ ಖಾಸಗಿ ರೆವಿನ್ಯೂ ಜಾಗದಲ್ಲಿ ನಿರ್ಮಿಸಿರುವ ಮನೆಗಳನ್ನು ಸಕ್ರಮಗೊಳಿಸುವಿಕೆ

777(830) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ರೆವಿನ್ಯೂ ನಿವೇಶನಗಳಲ್ಲಿ (ಭೂ ಪರಿವರ್ತನೆ ಹೊಂದದ) ಕಟ್ಟಿಕೊಂಡಿರುವ ಮನೆಗಳ ಸಂಖ್ಯೆ ಎಷ್ಟು; ಅವುಗಳ ಸಕ್ರಮಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಆ) ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಯೋಜನೆಯಲ್ಲಿ ಈವರೆಗೆ ಖಾಸಗಿ ರೆವಿನ್ಯೂ ನಿವೇಶನಗಳಲ್ಲಿ ಕಟ್ಟಿಕೊಂಡಿರುವ ಎಷ್ಟು ಮನೆಗಳನ್ನು ಸಕ್ರಮಗೊಳಿಸಲಾಗಿರುತ್ತದೆ; ಈ ಬಗ್ಗೆ ವಿಧಿಸಲಾಗಿರುವ ದಂಡ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕ ಎಷ್ಟು; (ವಿವರ ನೀಡುವುದು)

ಇ) ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ 94(ಸಿ) ಅಡಿಯಲ್ಲಿ ಅನಧಿಕೃತ ಮನೆ ಸಕ್ರಮ (ಸರ್ಕಾರಿ ರೆವಿನ್ಯೂ ಭೂಮಿಯಲ್ಲಿ) ಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು? ಈವರೆಗೆ ಸಕ್ರಮಗೊಳಿಸಲಾದ ಮನೆಗಳ ಸಂಖ್ಯೆ ಎಷ್ಟು? ಈ ಯೋಜನೆಯಲ್ಲಿ ಕಟ್ಟಡಕ್ಕೆ ಲಗತ್ತಾಗಿರುವ ಖಾಲಿ ನಿವೇಶನ (ಜಾಗ) ಸಕ್ರಮಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ವಿವರ ತಿಳಿಸುವುದು).

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) 1912, ಈ ಹಿಂದೆ ಜಾರಿಯಲ್ಲಿದ್ದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991ರನ್ವಯ ಕ್ರಮ ಕೈಗೊಳ್ಳಲಾಗಿದೆ.

ಆ) 530 ಮನೆಗಳು, ಈ ಪೈಕಿ 183 ಮನೆಗಳಿಂದ ರೂ. 7,35,388-00 ಅಭಿವೃದ್ಧಿ ಶುಲ್ಕ ಹಾಗೂ ರೂ. 9,05,213-00 ದಂಡ ಶುಲ್ಕವನ್ನು ವಸೂಲಿ ಮಾಡಲಾಗಿದೆ.

ಇ) 1912 ಅರ್ಜಿಗಳು ಬಂದಿವೆ. ಈ ಪೈಕಿ 530 ಮನೆಗಳನ್ನು ಸಕ್ರಮಗೊಳಿಸಿ ಆದೇಶಿಸಲಾಗಿದೆ. ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಸಕ್ರಮಗೊಳಿಸುವ ಸಂದರ್ಭ ಉದ್ಭವಿಸುವುದಿಲ್ಲ.

ಕೊರಟಗೆರೆ ತಾಲ್ಲೂಕಿನಲ್ಲಿ ಬರುವ ಸಣ್ಣ ಕೆರೆಗಳು

779(813) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕಿನಾದ್ಯಂತ ಬರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅಧಿಕವಾದ ಹೂಳು ತುಂಬಿರುವ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳ ಹೂಳು ತೆಗೆಯಲು ಸರ್ಕಾರವು ಬಿಡುಗಡೆ ಮಾಡಿರುವ ಮೊತ್ತ ಎಷ್ಟು; (ಗ್ರಾಮವಾರು ವಿವರ ನೀಡುವುದು)

ಇ) ಕೆರೆಗಳ ಹೂಳುಗಳನ್ನು ತೆಗೆದು ನೀರಿನ ಪೂರ್ಣ ಪ್ರಮಾಣದ ಮಟ್ಟವನ್ನು ಕಾಪಾಡುವುದಲ್ಲದೇ ಈ ಭಾಗದ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡಲು ಸರ್ಕಾರದವರು ಯಾವಾಗ ಕ್ರಮ ಕೈಗೊಳ್ಳುವರು?